**S.C. No.**270/2019 ಪಿ.ಡಬ್ಲ್ಯೂ-7

**ಸಾಕ್ಷಿಯನ್ನು ದಿನಾಂಕ 26.9.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಸ್ ವಕೀಲರಿಂದಃ**

ನಾನು ಉದಯಕೃಷ್ಣ ಹೋಟೆಲ್ ಬಳಿ ಚಾಸ6 ಮಹಮ್ಮದ್ ಸದ್ದಂ ಜೊತೆ ಈರುಳ್ಳಿ ವ್ಯಾಪಾರ ಮಾಡುತ್ತೇನೆ. ನಾನು ಶಾಲೆಗೆ ಹೋಗುತ್ತೇನೆ ಮತ್ತು ಶಾಲೆ ಮುಗಿದ ಬಳಿಕ ವ್ಯಾಪಾರ ಮಾಡುತ್ತೇನೆ. ಈಗ ಚರ್ಚ್ ಶಾಲೆಯಲ್ಲಿ 10 ನೇ ತರಗತಿ ಓದುತ್ತೇನೆ. ನಾನು ನನ್ನ ತಾಯಿ ಇರುವಾಗ ರಾತ್ರಿ 9 ಗಂಟೆಗೆ ಮಲಗಿ ಬೆಳಿಗ್ಗೆ 8 ಗಂಟೆಗೆ ಏಳುತ್ತಿದ್ದೆ. ನನ್ನ ತಾಯಿ ಮರಣ ಹೊಂದಿದ ಹಿಂದಿನ ದಿನ ರಾತ್ರಿ 9.30 ಗಂಟೆಗೆ ಮಲಗಿ ಬೆಳಿಗ್ಗೆ 8.30 ಗಂಟೆಗೆ ಎದ್ದಿರುತ್ತೇನೆ. ಬೆಳಿಗ್ಗೆ ನನ್ನ ತಾಯಿ ನನ್ನನ್ನು ಶಾಲೆಗೆ ರೆಡಿ ಮಾಡಿದರು, ಆಗ ನನ್ನ ತಂದೆ ಇರಲಿಲ್ಲ. ದಿನಾಂಕ 25.7.2019 ರಂದು ಬೆಳಿಗ್ಗೆ ನನ್ನ ತಂದೆಯು ನನ್ನ ತಾಯಿಯನ್ನು ಬೈದಿರುವುದಿಲ್ಲ, ರಾತ್ರಿ ಬೈದಿರುತ್ತಾರೆ. ದಿನಾಂಕ 24.7.2019 ರಂದು ರಾತ್ರಿ 9.30 ಗಂಟೆಗೆ ಮಲಗಿ ಬೆಳಿಗ್ಗೆ ಏಳುವವರೆಗೆ ಏನು ನಡೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ನಿಜ. ನನ್ನ ತಾಯಿ ಇರುವವರೆಗೆ ನನ್ನ ತಂದೆ ನನ್ನ ತಾಯಿ ಮತ್ತು ನಮ್ಮ ಜೊತೆ ಚನ್ನಾಗಿದ್ದರು ಎಂದರೆ ಜಗಳ ಮಾಡುತ್ತಿದ್ದರು. ಯಾವ ವಿಚಾರಕ್ಕೆ ಜಗಳ ಮಾಡುತ್ತಿದ್ದರು ಎಂದರೆ ನನ್ನ ತಂದೆಯ ತಮ್ಮನ ಬಗ್ಗೆ ಗುಮಾನಿ ಮಾಡುತ್ತಿದ್ದರು. ನನ್ನ ತಂದೆ ಆ ರೀತಿ ಯಾವ ಗುಮಾನಿ

ಮಾಡುತ್ತಿರಲಿಲ್ಲ, ನನ್ನ ತಾತನ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾತ ಏನೇನು ಹೇಳಬೇಕೆಂದು ಹೇಳಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

ಈ ವೇಳೆಗೆ ಸರ್ಕಾರಿ ಆಭಿಯೋಜಕರು ಮುಖ್ಯ ವಿಚಾರಣೆಯಲ್ಲಿ ರಾತ್ರಿ 11 ಗಂಟೆಗೆ ನನ್ನ ತಂದೆ ಹಿಂಸೆ ನೀಡಿರುತ್ತಾನೆ ಎಂದು ಹೇಳಿದ್ದು ಈಗ ರಾತ್ರಿ ಏನು ನಡೆದಿದೆ ಎಂದು ಗೊತ್ತಿಲ್ಲ ಎಂದು ಹೇಳುತ್ತಿದ್ದು, ಆ ಕಾರಣಕ್ಕೆ ಮರು ವಿಚಾರಣೆ ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿದಾಗ ಕೇವಲ ಮುಖ್ಯ ವಿಚಾರಣೆ ಮತ್ತು ಪಾಟೀ ಸವಾಲಿನಲ್ಲಿ ವ್ಯತ್ಯಾಸ ಇದ್ದ ಮಾತ್ರಕ್ಕೆ ಮರು ವಿಚಾರಣೆಗೆ ಅವಕಾಶ ಇರುವುದಿಲ್ಲವಾದ್ದರಿಂದ ಅಭಿಯೋಜಕರ ಮನವಿಯನ್ನು ತಿರಸ್ಕರಿಸಲಾಗಿದೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು